ಆ) ಹಾಗಿದ್ದಲ್ಲಿ ಈಗ ಯಾವುದಾದರೂ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಖಾಸಗಿಯವರಿಗೆ ನಡೆಸಲು ಕೊಡಲಾಗಿದೆಯೇ

ಇ) ಖಾಸಗಿಯವರಿಗೆ ಪ್ರಾಥಮಿಕ ಆರೋಗ್ಯ ಕೆಂದ್ರಗಳನ್ನು ನಡೆಸಲು ಕೊಡುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುವ ಸಂಗತಿ ನಿಜವೇ

ಈ) ಒಂದು ವೇಳೆ ಖಾಸಗಿಯವರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ ನಡೆಸಲು ಕೊಡಬೇಕೆಂದಲ್ಲಿ ಯಾವ ಷರತ್ತುಗಳ ಮೇಲೆ ಕೊಡಲಾಗುವುದು

ಇ) ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ನೇಸರಗಿ ಗ್ರಾಮದ ಹೆರಿಗೆ ಆಸ್ಪತ್ರೆಯನ್ನು ಕೆ ಎಲ್ ಇ ಸಂಸ್ಥೆಯವರಿಗೆ ನಡೆಸಲು ಕೊಡಲಾಗುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇದೆ

ಆ) 30 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಖಾಸಗಿಯವರಿಗೆ ನಡೆಸಲು ಕೊಡಲಾಗಿದೆ

ಇ) ಇಲ್ಲ

ಈ) ಈ ಕೆಳಕಂಡ ಷರತ್ತುಗಳನ್ನು ವಿಧಿಸಿದೆ

1 ಸದರಿ ಸಂಸ್ಥೆಯ ಸೊಸೈಟಿ ಆಕ್ಟ್ ಪ್ರಕಾರ ನೋಂದಾಯಿಸಿಕೊಂಡಿರಬೇಕು ಹಾಗೂ ಹೆಸರಾಂತ ಸಂಸ್ಥೆಯಾಗಿರಬೇಕು

2 ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅವರದ್ದೇ ಸಿಬ್ಬಂದಿ ನೇಮಿಸಿಕೊಳ್ಳಬಹುದು ಅಥವಾ ಇಲಾಖೆಯ ಸಿಬ್ಬಂದಿಯನ್ನು ನಿಯೋಜನೆ ಇಟ್ಟುಕೊಳ್ಳಬಹುದು

3 ಸಿಬ್ಬಂದಿಗೆ ಸಂಬಳದ ಶೇ 75 ರಷ್ಟನ್ನು ಮಾತ್ರ ಸರ್ಕಾರದ ವತಿಯಿಂದ ಪಾವತಿ ಮಾಡಲಾಗುವುದು

4 ಪ್ರಸ್ತಾವನೆಗಳು ಆಯಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನ್ವಾಹಕ ಅಧಿಕಾರಿಗಳ ಮುಖಾಂತರ ಬರಬೇಕು

ಉ) ಇಲ್ಲ

ಶಿಕ್ಷಕರ ಹುದ್ದೆಗಳ ನೇಮಕಾತಿ

145 (35) ಶ್ರೀ ಕೌಜಲಗಿ ಮಾಹಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆ ಖಾಲಿ ಇರುತ್ತವೆ, (ತಾಲ್ಲೂಕುವಾರು ಮಾಹಿತಿ ನೀಡುವುದು)

ಇ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ತುಂಬಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಪ್ರೋ॥ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 6555 ಖಾಲಿ ಹುದ್ದೆಗಳಿರುತ್ತವೆ ಜಿಲ್ಲಾವಾರು ಮಾಹಿತಿ ಪಟ್ಟಿ ಲಗತ್ತಿಸಿದೆ

ಆ) ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 224 ಹುದ್ದೆಗಳು ಖಾಲಿ ಇರುತ್ತವೆ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ

ತಾಲ್ಲೂಕು	ವಿಷಯ			
	ಕನ್ನಡ	ಮರಾಠಿ	ಉರ್ದು	ಒಟ್ಟು
ಬೆಳಗಾವಿ	01	00	00	01
ಬೆಳಗಾಂ ತಾ	00	00	00	00
ಬೈಲಹೊಂಗಲ	00	00	26	26
ಖಾನಪುರ	16	158	01	175
ರಾಮದುರ್ಗ	01	00	05	06
ಸವದತ್ತಿ	00	00	16	16
ಒಟ್ಟು	18	158	48	224

ಇ) ಬೈಲಹೊಂಗಲದಲ್ಲಿ ಹಾಗೂ ಸವದತ್ತಿ ತಾಲ್ಲೂಕಿನಲ್ಲಿ ಉರ್ದು ಶಿಕ್ಷಕರ ಹುದ್ದೆ ಖಾಲಿ ಇದ್ದು ಈಗಾಗಲೇ ಉರ್ದು ಶಿಕ್ಷಕರು ಸೇರಿದಂತೆ ಒಟ್ಟು ರಾಜ್ಯದಲ್ಲಿ 5000 ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಅಂತಿಮ ಘಟ್ಟದಲ್ಲಿದೆ ಶೀಘ್ರದಲ್ಲಿ ಖಾಲಿ ಹುದ್ದೆಗಳನ್ನು ತುಂಬಲಾಗುವುದು

ಅನುಬಂಧ-1

2003-04ನೇ ಸಾಲಿನ ಖಾಲಿ ಹುದ್ದೆಗಳ ಜಿಲ್ಲಾವಾರು ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಖಾಲಿ ಇರುವ ಹುದ್ದೆಗಳು	ಜನವರಿ 2004 ರೊಳಗಾಗಿ ಭರ್ತಿ ಹುದ್ದೆಗಳು	ನೇಮಕಾತಿ ನಂತರ ಉಳಿಯುವ ಖಾಲಿ ಹುದ್ದೆಗಳು
1	2	3	4	5
1	ಬೆಂಗಳೂರು ಉತ್ತರ	–	–	–
2	ಬೆಂಗಳೂರು ದಕ್ಷಿಣ	–	–	–
3	ಬೆಂಗಳೂರು ಗ್ರಾಮಾಂತರ	460	360	100
4	ಕೋಲಾರ	44	–	44
5	ಚಿಕ್ಕಮಗಳೂರು	260	260	–
6	ತುಮಕೂರು	208	125	83
7	ಮಧುಗಿರಿ	285	285	–
8	ಶಿವಮೊಗ್ಗ	507	305	202
9	ಚಿತ್ರದುರ್ಗ	105	105	–
10	ದಾವಣಗೆರೆ	110	–	110
11	ಮೈಸೂರು	220	200	20
12	ಚಾಮರಾಜನಗರ	103	40	63

1	2	3	4	5
13	ಮಂಡ್ಯ	401	–	401
14	ಹಾಸನ	300	300	–
15	ಚಿಕ್ಕಮಗಳೂರು	235	235	–
16	ಕೊಡಗು	65	40	25
17	ದಕ್ಷಿಣ ಕನ್ನಡ	285	195	190
18	ಉಡುಪಿ	45	45	–
19	ಬೆಳಗಾಂ	224	80	144
20	ಚಿಕ್ಕೋಡಿ	630	630	–
21	ಬಿಜಾಪುರ	–	–	–
22	ಬಾಗಲಕೋಟೆ	125	105	20
23	ಧಾರವಾಡ	13	–	13
24	ಗದಗ	25	25	–
25	ಹವೇರಿ	25	185	90
26	ಉತ್ತರ ಕನ್ನಡ	275	275	–
27	ಗುಲಬರ್ಗ	85	85	–
28	ಯಾದಗಿರಿ	340	340	–
29	ಬಳ್ಳಾರಿ	175	125	50
30	ರಾಯಚೂರು	215	215	–
31	ಕೊಪ್ಪಳ	135	135	–
32	ಬೀದರ್	305	305	–
	ಒಟ್ಟು	6555	5000	1555

ಬೆಳಗಾವಿ ಜಿಲ್ಲೆ ತಾಲ್ಲೂಕಿನ ನೇಸರಗಿ ಗ್ರಾಮದ ಸರ್ಕಾರಿ ಪದವಿ ಕಾಲೇಜಿನ ಕಟ್ಟಡ ಕಾಮಗಾರಿ

146 (36) ಶ್ರೀ ಕೌಜಲಗಿ ಮಾಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿಜಿಲ್ಲೆ ತಾಲ್ಲೂಕಿನ ನೇಸರಗಿ ಗ್ರಾಮದ ಸರ್ಕಾರಿ ಪದವಿ ಕಾಲೇಜಿನ ಕಟ್ಟಡ 2002–2003ನೇಸಾಲಿನ ಆಯವ್ಯಯದಲ್ಲಿ ಸೇರದೇ ಇರುವುದರಿಂದ ಅರ್ಧಕ್ಕೆ ನಿಂತ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ನಿಂತಿರುವ ಕೆಲಸಕ್ಕೆ ಬೇಕಾಗಿರುವ ರೂ 20 00 ಲಕ್ಷಗಳನ್ನು ಈ ಸಾಲಿನ ಆಯವ್ಯಯದಲ್ಲಿ ಸೇರಿಸಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ?